ಶ್ರೀನಿವಾಸ. ರಾಮಯ್ಯನಿಗಾದರೆ ಮಗಳು ಚೆನ್ನಾಜಿಯನ್ನು ಹೆರುವಾಗಲೇ ಹೆಂಡತಿ ತೀರಿಕೊಂಡಿದ್ದಳು. ಹೆಂಡತಿಯ ತಂಗಿ ಲಗ್ನವಿಲ್ಲದ ಶಿವಮ್ಮನೇ ಇರಸವಾಡಿಯಿಂದ ಅವ್ವನಿಲ್ಲದ ತಬ್ಬಲಿ ಕೂಸೆಂದು ಭಾವನ ಮನೆಗೆ ಬಂದು ಆಗಾಗ ಇದ್ದು ಹೋಗುತ್ತಿದ್ದಳು. ರಾಮಯ್ಯ ತಿರುಗೊಂದು ಕೂಡಾವಳಿಯ ಲಗ್ನವನ್ನಾದರೂ ಯಾಕೆ ಆಗಲಿಲ್ಲವೋ ಗೊತ್ತಿಲ್ಲ. ಅವರಿವರ ಬಳಿ ಎಂಬುದಕ್ಕಿಂತ ಚೆನ್ನಾಜಿ ಮುಂದೆಯೇ ಆಗೀಗ ಸತ್ತ ಅಕ್ಕನಿಗಿಂತ ಮೊದಲು ಭಾವನಿಗೆ ನನ್ನನ್ನೇ ನೋಡಿದ್ದುದು ಎಂದು ಶಿವಮ್ಮ ಇಪ್ಪತ್ತು ವರ್ಷದ ಹಳೆಯ ಸಂಗತಿಯನ್ನು ನೆನಪಿಸುವಳು.



ರಾಮಯ್ಯನು ಮೈಸೂರು ಸಿಟಿಯವರಿಗೆ ಬಟ್ಟೆ ಹೊಲಿಯುವ ಟೈಲರ್ ಅಲ್ಲ. ಊರವರೆಲ್ಲ ಗುಳೆ ಎದ್ದು ಹೋದ ಮೇಲೆ ಸುತ್ತಣ ಗ್ರಾಮದವರು ಮಾಲಿನ ಮಾರ್ಗವಾಗಿ ಬೆಳಗ್ಗೆ ಹೋಗುವಲ್ಲೋ ಸಂಜೆ ಬರುವಲ್ಲೋ ಹರಿದ ಪಂಚೆ, ಶರಟು ಇಲ್ಲ ಗಾರೆ ಬಾಂಡಲಿ ಎತ್ತುವಾಗ ಬಿಟ್ಟುಕೊಂಡ ಚೆಡ್ಡಿ, ಪ್ಯಾಂಟಿನ ಹೊಲಿಗೆಯನ್ನು, ಕಿತ್ತ ಗುಂಡಿಗಳನ್ನು ಹಾಕಿಸಿಕೊಂಡು ಕಾಸು ಕೊಟ್ಟು ಕ್ಷೇಮ ಸಮಾಚಾರ ವಿಚಾರಿಸಿ ನಡೆಯುವರು. ಮುಂದಿನ ಮುಖ್ಯ ಸಮಾಚಾರವೆಂದರೆ, ರಾಮಯ್ಯನದಲ್ಲದೆ ವೆಂಕಟರಮಣಯ್ಯನವರ ಮನೆಯ ಮುಂದಲ ಅಂಗಳವನ್ನು ಒತ್ತರಿಸಿ ಮಾಲಿನ ಭಾರಿ ಕಾಂಪೌಂಡು ಏಳುವಲ್ಲಿ ರಾಮಯ್ಯನು ಬಲಗೈಯಲ್ಲಿ ಕತ್ತರಿ, ಎಡಗೈಯಲ್ಲಿ ಕಬ್ಬಿಣದ ಗಜಗಡ್ಡಿ ಹಿಡಿದು 'ಯಾವನಲೇ ಅವನು ದರವೇಸಿ ನನಮಗ ಮನೆ ಮುಂದಲ ಜಾಗ ಒತ್ತರಿಸಿಕಂಡು ಬರ್ತಾ ಇರವುನು' ಎಂದು ಬುಲ್ಡೋಜರ್ ಡ್ರೈವರ್ ಮೇಲೆ ಕೈ ಮಾಡಲು ಎದ್ದ. ಅತ್ತ ನಿಂತಿದ್ದ ಮೇಸ್ತ್ರಿಗೂ 'ಅದ್ಯಾವನವನು ನಿನ್ನ ಇಂದ್ರಲೋಕದ ಬಿಕನಾಸಿ ಅವುನ್ನ ಕರ್ಕಂಡು ಬಂದು ನಿಲ್ಲಸ್ಲಾ ನೋಡ್ತೀನಿ' ಎಂದು ಅಬ್ಬರಿಸಿದ.

ಮೇಸ್ತ್ರಿ ಕಂತ್ರಾಟುದಾರನಿಗೆ ಸುದ್ದಿ ಮುಟ್ಟಿಸಿ, ಸಮಾಚಾರವು ಬೆಂಗಳೂರಿಗೆ ತಲುಪಲು ಆ ಕಡೆಯಿಂದ 'ಗದ್ದಲ ಹಚ್ಚುವವರ ಸಂಸಾರದಲ್ಲಿ ಒಬ್ಬಿಬ್ಬರು ಎಸ್‌ಎಸ್‌ಎಲ್‌ಸಿ, ಪಿಯುಸಿ, ಮುಟ್ಟಿದ್ದರೆ ಶೋರೂಂನಲ್ಲಿ ಒಂದೊಂದು ಕೆಲಸ ತಗುಲಿಸಿ ವ್ಯವಹಾರ ಸಲೀಸು ಮಾಡಿ' ಎಂಬ ಅಪ್ಪಣೆ ಬಂದಿತು.

ಈ ಕ್ರಮದಲ್ಲಿ ಚೆನ್ನಾಜಿಗೂ, ಶ್ರೀನಿವಾಸನಿಗೂ ಮಾಲಿನಲ್ಲಿ ನೌಕರಿ ಸಿಕ್ಕಿಬಿಟ್ಟಿತು. ಇಷ್ಟಾಗಿ ರಾಮಯ್ಯನಿಗೂ, ಪೂಜಾರಪ್ಪನವರಿಗೂ ಮಕ್ಕಳು ಆ ಉದ್ಯೋಗದಲ್ಲಿ ಹಾಜರಾಗುವುದು ಇಷ್ಟವಿರಲಿಲ್ಲ. ಶ್ರೀನಿವಾಸ ಮಾಲಿನಲ್ಲಿ ಲಕ್ಷ್ಮಿ, ಸರಸ್ವತಿ, ಬುದ್ಧ, ಬಸವೇಶ್ವರ, ವೆಂಕಟೇಶ್ವರ, ಅಂಬೇಡ್ಕರ್, ಕೃಷ್ಣ ಮುಂತಾದ ಲೋಹ ವಿಗ್ರಹಗಳನ್ನಲ್ಲದೆ ಅದರ ಫೋಟೋಗಳು, ಇನ್ನಿತರ ಆಕರ್ಷಕ ಗಿಫ್ಟ್ ಮತ್ತು ಶುಭಾಶಯ ಐಟಂಗಳ ಮಾರಾಟ ವಿಭಾಗದಲ್ಲಿ ದಾಖಲಾಗಿದ್ದ. ಚೆನ್ನಾಜಿ ಸೇರಿದ್ದು ಹೆಣ್ಣು, ಗಂಡಿನ ಥರಾವರಿಯ ದಿರಿಸು ತೆಗೆದು ತೋರಿಸುವ, ಮಾರುವ ಜಾಗ.

* * *

ಬೆಂಗಳೂರೇ ಅಲ್ಲದೆ ನಾನಾ ರಾಜ್ಯಗಳಿಂದ ಕಾರುಗಳಲ್ಲಿ ಮಾಲಿನತ್ತ ಬರುವ ಶೋಕಿದಾರರ ಮುಂದೆ ತಮ್ಮ ನಿಜ ನಾಮಧೇಯ ಚಂದವಲ್ಲವೆಂದು ಚೆನ್ನಾಜಿಯು ಶೈನಿಯಾಗಿಯೂ, ಶ್ರೀನಿವಾಸನು ನಿವೇಶ್ ಆಗಿಯೂ ಬದಲಾಗಿದ್ದರು. 'ಲರ್ನ್ ಇಂಗ್ಲಿಷ್ ಇನ್ ಫಿಫ್ಟೀನ್ ಡೇಸ್' ತರಗತಿಗಳಿಗೆ ಹೋಗಿ ತಮಗೆ ಬರುತ್ತಿದ್ದ ಇಂಗ್ಲಿಷ್ ಪದಗಳೊಂದಿಗೆ ಇನ್ನಷ್ಟು ವಾಕ್ಯಗಳನ್ನು ಸೇರಿಸಿಕೊಂಡರು. ಕಂಪ್ಯೂಟರ್ ಮೇಲೆ ಕೈಯಾಡಿಸಿ ಬಿಲ್ ಮಾಡುವುದು, ಹಣ ಎಣಿಸುವುದು, ಚಿಲ್ಲರೆ ನೀಡುವುದು ಬಿಟ್ಟರೆ ಹೆಚ್ಚು ಮಾತುಕತೆ ಇಲ್ಲ. ಇದರೊಂದಿಗೆ ಇನ್ನಷ್ಟು ಶಿಸ್ತಿನ ಸಂಗತಿ ಅಂದರೆ ಮಾಲಿಗೆ ಹಾಜರಾಗಬೇಕಾದದ್ದು ಬೆಳಿಗ್ಗೆ ಹನ್ನೊಂದು ಗಂಟೆಗೆ. ವಾಪಸು ಹೋಗುವುದು ರಾತ್ರಿ ಒಂಬತ್ತರ ಮೇಲೆ. ಶನಿವಾರ, ಭಾನುವಾರ ರಾತ್ರಿ ಹನ್ನೊಂದಾದರೂ ಆಗಬಹುದು. ಅದರಿಂದ ಬೆಳಗಿನ ಹೊತ್ತಿಗೆ ಡಬ್ಬಿಯಲ್ಲಿ ಅನ್ನ, ಸಾಂಬಾರು, ಚಿತ್ರಾನ್ನ ತರುವರು. ಬಂದವರು ಮಾಲಿನ ಬಾತ್‌ರೂಮಿನಲ್ಲೇ ಸ್ನಾನ ಮಾಡಿ, ಸಮದಿರಿಸು ತೊಟ್ಟು ಅಲಂಕಾರವಾಗಬೇಕು. ಶೈನಿ ದಿನವಿಡೀ ತಲೆಯ ಹೆರಳು, ಲಿಫ್‌ಸ್ಟಿಕ್ ಮಾಸಿ ಹೋಗಿದೆಯೇ ಎಂದು ನೋಡಿಕೊಳ್ಳುವಳು. ನಿವೇಶ್ ಕ್ರಾಪು, ಕತ್ತಿನ ಟೈ, ಮೈಮೇಲಿನ ಕೋಟು ನೀಟಾಗಿ ಕೂತಿರುವುದೇ ಅಂದು ಮುಟ್ಟಿ ಮುಟ್ಟಿ ನೋಡಿಕೊಳ್ಳುವನು.

ಬೆಳಗಿನಿಂದ ರಾತ್ರಿ ಹನ್ನೊಂದರವರೆಗೆ ಇಷ್ಟು ತಿಂಗಳು ಮಾಲೊಳಗೆ ನಿಂತಿದ್ದರೂ ತಮ್ಮ ಧಣಿ ಯಾರು, ಎಲ್ಲಿಯವರು ಎಂಬುದು ಗುರುತಿಲ್ಲ. ತಮ್ಮದು ದಿನಗೂಲಿಯೋ ತಿಂಗಳ ಸಂಬಳವೋ ಗೊತ್ತಿಲ್ಲ. ಅಂದರೆ ಎರಡೂ ಇಲ್ಲ. ಯಾರನ್ನೋ ಕೇಳಿದ್ದಕ್ಕೆ ಆಯಾ ಶೋರೂಂನ ಮಾರ್ಕೆಟಿಂಗ್ ನೋಡಿಕೊಂಡು ಸಂಬಳ ನಿಗದಿ ಮಾಡಲಾಗುವುದು. ಸದ್ಯಕ್ಕೆ ನಿತ್ಯ ಬೆಳಿಗ್ಗೆ ಟೀ, ಸಂಜೆ ಸ್ನ್ಯಾಕ್ಸ್, ಸಮದಿರಿಸು, ಇನ್ನಿತರ ಅಲಂಕಾರದ ಖರ್ಚು ಭರಿಸಲಾಗುತ್ತಿದೆ ಅಷ್ಟೇ ಎಂಬ ಸಮಾಚಾರ ಸಿಕ್ಕಿತು.

ಶನಿವಾರ, ಭಾನುವಾರ ಸಾವಿರದ ಲೆಕ್ಕದಲ್ಲಿ ಮಾಲಿನ ಸುತ್ತ ಬರುತ್ತಿದ್ದವರ ಮೊಬೈಲ್ ನಂಬರನ್ನು ಪ್ರವೇಶದ್ವಾರದಲ್ಲಿ ಸಂಗ್ರಹಿಸಬೇಕು. ಅದನ್ನು ಕ್ಷಣಾರ್ಧದಲ್ಲಿ ಬೇರೆ ಬೇರೆ ಮಾಲು ಬಿಕರಿಯ ಹುಡುಗ, ಹುಡುಗಿಯರಿಗೆ ರವಾನಿಸಲಾಗುವುದು. ಅಲ್ಲಿಂದ ಒಳಬಂದವರೆಲ್ಲರಿಗೆ ಮೊಬೈಲಿನಲ್ಲಿ ಮೆಸೇಜು ಹಾಕುತ್ತಿರಬೇಕು. 'ತ್ವರೆ ಮಾಡಿ, ಈ ವಾರ ಮಾತ್ರ ನೀವು ಕೊಳ್ಳುವ ಮಾಲಿಗೆ ಶೇಕಡ ಐವತ್ತರಷ್ಟು ಕಡಿತ ಮಾರಾಟ' ಎಂದು ಕರೆ ನೀಡುತ್ತಲೇ ಇರಬೇಕು. ಮಾಲಿನವರು ಕೊಟ್ಟ ಆ ಮೊಬೈಲನ್ನು ರಾತ್ರಿ ಮನೆಗೆ ತರುವಂತಿಲ್ಲ.



ತಿಂಗಳೆಲ್ಲ ಬರಿಗೈಲಿ ಬರುತ್ತಿದ್ದ ಮಗಳನ್ನು ಕಂಡು ರಾಮಯ್ಯನು ಹಲ್ಲು ಕಡಿದು, 'ನಡೀ ಬತ್ತೀನಿ ನಾಳೆ ಮಾಲೊಳಗೆ ಅದ್ಯಾವನವನು ನಿನ್ನ ಓನರು ತೋರಿಸು' ಅನ್ನುತ್ತಿದ್ದ. ಅಪ್ಪ ಇನ್ನೆಲ್ಲಿ ಒಳಗೆ ಬಂದುಬಿಡುವನೋ ಅಂದುಕೊಂಡ ಚೆನ್ನಾಜಿ ಬೆದರಿ 'ಅಯ್ಯ, ಬ್ಯಾಡಕಣಪ್ಪ, ಇನ್ನೇನು ಒಂದೆರಡು ತಿಂಗಳಲ್ಲೆ ಸಂಬಳ, ಓವರ್‌ಟೈಮ್ ಚಾರ್ಜು ಎಲ್ಲಾ ಸೇರಿಸಿ ಕೊಡ್ತಾರಂತೆ' ಅಂದದ್ದಲ್ಲದೇ – 'ನೀನು ಮಾಲೊಳಗೆ ಬರಕ್ಕೆ ದಾರಿ ಗೊತ್ತಾಗಲ್ಲ ಕಣಪ್ಪ' ಅಂತಲೂ ಒಂದು ಬೆದರಿಕೆ ಹಾಕಿದಳು. ಶ್ರೀನಿವಾಸನೂ ಚೆನ್ನಿಯೂ ತಮ್ಮ ಅಪ್ಪಂದಿರು ಮಾಲಿನೊಳಗೆ ನುಗ್ಗದಂತೆ ನೋಡಿಕೊಂಡಿದ್ದರು.

ಹತ್ತಾರು ಬಗೆಯ ಕಾರುಗಳಲ್ಲಿ ಆಗಮಿಸುವ ಯುವಕ, ಯುವತಿಯರಿಗೆ ಪಾರ್ಕಿಂಗ್ ವ್ಯವಸ್ಥೆ ಇರುವುದು ನೆಲಮಹಡಿಯಲ್ಲಿ. ವಾಹನ ಪಾರ್ಕುಗೊಳಿಸಿದ ಜೋಡಿಗಳು ಪರಸ್ಪರ ನಡುಬಳಸಿ ಅರೆಗತ್ತಲ ನೆಲಮಹಡಿಯಿಂದಲೇ ಮಾಲಿನೊಳಗೆ ಪ್ರವೇಶಿಸುವರು. ಮಹಡಿ ಹತ್ತಿದರೆ ಝಗಮಗಿಸುವ ಆ ಮಾಲಿಗೆ ಮತ್ತೆಲ್ಲೂ ಹೊರಬಾಗಿಲೇ ಇಲ್ಲ. ನಾಲ್ಕನೇ ಮಹಡಿಯಲ್ಲಿ ಮೂರು ಸಿನಿಮಾ ಮಂದಿರ, ಫುಡ್‌ಕೋರ್ಟ್. ಎಂಟನೆಯ ಮಹಡಿಯಲ್ಲಿ ನೃತ್ಯದ ಅಂಗಳ. ಹಗಲಲ್ಲೂ ಡ್ರಿಂಕ್ಸ್‌ಗೆ ಅವಕಾಶವುಂಟು. ರಾತ್ರಿ ಎಂಟಾದ ಮೇಲೆ ಮಹಡಿಯ ಮೇಲಿನ ಸಂಗೀತದ ಸದ್ದು ಹಾದಿಬೀದಿಯವರ ಕಿವಿಗೂ ಕೇಳಿಸುವುದು. ರಾಮಯ್ಯನಿಗೂ ಪೂಜಾರಪ್ಪನವರಿಗೂ ಇನ್ನೆಲ್ಲಿ ತಮ್ಮ ಮಕ್ಕಳು ಅದೇ ಕುಣಿತದಲ್ಲಿ ಒಂದಾಗಿಬಿಡುವರೋ ಎಂದು ಅಲ್ಲಿಯ ಡ್ರಮ್ ಸದ್ದಿನಂತೆ ಆಗಾಗ ಎದೆ ಬಡಿದುಕೊಳ್ಳುವುದು. ಆದರೆ ಚೆನ್ನಾಜಿ ಹಾಗೂ ಶ್ರೀನಿವಾಸ ಶನಿವಾರ–ಭಾನುವಾರ ಬಿಟ್ಟರೆ ಉಳಿದಂತೆ ರಾತ್ರಿ ಒಂಬತ್ತಕ್ಕೆ ಮನೆಗೆ ಹಾಜರಾಗುವರು.

* * *

ಪೂಜಾರಪ್ಪನವರು ತಮ್ಮ ಪಂಚೆಯ ಅಂಚು ಹೊಲಿಸಿಕೊಳ್ಳಲು ಬಂದವರು ಲೋಕಾಭಿರಾಮದಲ್ಲಿ 'ರಾಮಣ್ಣ ಲೋಕವೆಲ್ಲ ಬಂದು ಈ ಬಿಲ್ಡಿಂಗಿನ ಒಳಗೆ ಹೋಗಿ ಹತ್ತಾರು ಪದಾರ್ಥ ಕೊಂಡು ಕುಡಿದು, ಕುಣಿದು ಹೋಗುತ್ತದಲ್ಲಾ; ಇದು ನಂದು, ನಿಂದೇ ಸೈಟು. ನೀನು ಯಾವಾತ್ತಾದರೂ